ಇದರಲ್ಲಿ ವ್ಯಂಗ್ಯದ ಮೊನಚಿದೆ. ಬಹಳ ವರ್ಷಗಳ ಹಿಂದೆ ಅಮೆರಿಕದಿಂದ ಸರಬರಾಜಾಗುತ್ತಿದ್ದ ಗೋಧಿ ನುಚ್ಚಿನಿಂದ ತಯಾರಿಸಿದ ಉಪ್ಪಿಟ್ಟನ್ನು ಶಾಲೆಯ ಮಕ್ಕಳಿಗೆ ಮಧ್ಯಾಹ್ನ ಕೊಡುವ ವ್ಯವಸ್ಥೆಯನ್ನು ಸರಕಾರ ಮಾಡಿತ್ತು. ತುಂಬಾ ಹಸಿದುಕೊಂಡವರಿಗೆ ಅದು ಸಾಕಾಗುತ್ತಿರಲ್ಲ. ಗೋಧಿ ನುಚ್ಚು ಬಂದಾಗಿನಿಂದ ಉಪ್ಪಿಟ್ಟಾಗಿ ಪ್ಲೇಟ್ ಸೇರುವವರೆಗೂ ಯಾರ್ಯಾರೋ ತಿನ್ನುತ್ತಿದ್ದರು; ಮಕ್ಕಳಿಗೆ ಬೇಕಾಗುವಷ್ಟು ಉಳಿಸುವುದಿಲ್ಲ ಎಂಬ ಮಕ್ಕಳ ಅನಿಸಿಕೆಯನ್ನು ಈ ಪದ್ಯ ವ್ಯಕ್ತಪಡಿಸುತ್ತದೆ!

ವಿದೇಶಿ ಆಹಾರ ಮೇಳಗಳಲ್ಲಿ ಹೆಚ್ಚು ಖರ್ಚಾಗುವುದು ಉಪ್ಪಿಟ್ಟಂತೆ! 2011 ಉಪ್ಪಿಟ್ಟಿಗೆ ಅಂತರರಾಷ್ಟ್ರೀಯ ಖ್ಯಾತಿ ತಂದುಕೊಟ್ಟ ವರ್ಷ. ಜೂನ್ 17, 2011ರಂದು ಲಾಸ್ ಏಂಜಲಿಸ್‌ನಲ್ಲಿ ನಡೆದ ಶೆಫ್ ಮಾಸ್ಟರ್ ಸ್ಪರ್ಧೆಯಲ್ಲಿ ಫ್ಲಾಯಿಡ್ ಕಾರ್ಡೋಸ್ ಎಂಬ ಮುಂಬಯಿ ಮೂಲದ ವ್ಯಕ್ತಿ ಉಪ್ಪಿಟ್ಟಿಗೆ ಅಣಬೆಯನ್ನು ಸೇರಿಸಿ ಮಾಡಿದ ಖಾದ್ಯಕ್ಕೆ ಪ್ರಶಸ್ತಿ ಪಡೆದ. ಅವನು ಗೆದ್ದ ಬಹುಮಾದ ಮೊತ್ತ ಒಂದು ಲಕ್ಷ ಡಾಲರ್. ಉಪ್ಪಿಟ್ಟಿಗೂ ಬೆಲೆ, ಘನತೆ, ಖ್ಯಾತಿ ಬಂದ ಗಳಿಗೆ ಅದಾಗಿತ್ತು.

ಎಂತಹದ್ದೇ ಪ್ರಯೋಗಕ್ಕೂ ಈ ಉಪ್ಪಿಟ್ಟು ಒಗ್ಗಿಕೊಳ್ಳುತ್ತದೆ ಎಂಬುದಕ್ಕೆ ಇಲ್ಲೊಂದು ಉದಾಹರಣೆ ಇದೆ. ಭಾರತದ ಮಾಸ್ಟರ್ ಶೆಫ್ ಅವತರಣಿಕೆಯಲ್ಲಿ ಸ್ಪರ್ಧಿಯೊಬ್ಬರು ಉಪ್ಪಿಟ್ಟನ್ನು ಸುಶಿ ಮ್ಯಾಟ್‌ನಲ್ಲಿ ರೋಲ್ ಮಾಡಿ, ಪ್ರೆಸೆಂಟ್ ಮಾಡಿ ಬಹುಮಾನ ಪಡೆದಿದ್ದಾರೆ. ನಮ್ಮ ಟೀವಿ ವಾಹಿನಿಗಳು ಉಪ್ಪಿಟ್ಟು ಮಾಡುವ ಸ್ಪರ್ಧೆಯೊಂದನ್ನು ಆಯೋಜಿಸಿದರೆ ಅದರ ಪರಿಣಾಮ ಕುತೂಹಲಕರವಾಗಿರುವುದರಲ್ಲಿ ಸಂದೇಹವಿಲ್ಲ. ಈ ಸ್ಪರ್ಧೆ ಇಡೀ ದೇಶದ ಗಮನವನ್ನು ತನ್ನತ್ತ ಸೆಳೆಯಬಹುದು.

ಹೆಣ್ಮಕ್ಕಳ ಅವಸರಕ್ಕೆ ಆಪದ್ಬಾಂಧವ ಎಂದರೆ ಉಪ್ಪಿಟ್ಟೆ ಸರಿ! ಆದರೂ ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ತಯಾರಿಸಬಹುದಾದ ಉಪ್ಪಿಟ್ಟು ಮಾಡಲೂ ಕೆಲವರಿಗೆ ಸಮಯವಿರುವುದಿಲ್ಲ. ಅಂಥವರು ಬೇರೆ ಬೇರೆ ಕಂಪನಿಗಳ ಇನ್‌ಸ್ಟಂಟ್ ಉಪ್ಮಾ ಮಿಕ್ಸ್ ತಂದು ಕುದಿಯುವ ನೀರಲ್ಲಿ ಹಾಕಿ ಕುದಿಸಿಕೊಳ್ಳಬಹುದು ಎಂದು ಸುಲಭವಾಗಿ ಹೇಳಬಹುದು. 'ಸಮಯಾವಕಾಶ ಇಲ್ಲ! ಮನೆಯಲ್ಲೇ ತಯಾರಿಸಿದ ಉಪ್ಪಿಟ್ ಮಿಕ್ಸ್ ಇದು. ಏನು, ಮಾರುಕಟ್ಟೆಯಿಂದ ತರ್ತೇವ? ಪಕ್ಕಾ ಹೋಮ್ ಮೇಡ್' ಎಂದು ವಾದಕ್ಕಿಳಿಯಬಹುದು ಕೆಲವರು. ಆದರೆ, ಇಲ್ಲಿ ಇನ್‌ಸ್ಟಂಟ್ ಮಿಕ್ಸ್ ನೆಪಮಾತ್ರ. ನನಗೆ ಬಾಂಧವ್ಯದ ಅಡಿಪಾಯ ಕುಸಿಯುತ್ತಿದೆ, ಸಂಬಂಧಗಳ ಎಳೆಗಳು ತುಂಡಾಗುತ್ತಿವೆ ಎಂದು ವಿಷಾದವಾಗುತ್ತದೆ. ಕಾಲಕಳೆದಂತೆ ನಾವು ನೆಪಮಾತ್ರದ ಸಂಬಂಧಗಳಿಗೆ ಒಗ್ಗಿಕೊಳ್ಳುತ್ತಿದ್ದೇವೆ ಎಂಬ ನೋವೂ ಕಾಡುತ್ತಿದೆ. ಸಂಬಂಧಗಳನ್ನು ನಿಭಾಯಿಸಲಾರದೆ, ಆತ್ಮೀಯತೆಯನ್ನು ಕಳೆದುಕೊಂಡು ಜಾಳುಜಾಳಾಗಿ ಸಂಬಂಧಗಳನ್ನು ನಟಿಸುತ್ತ ನಾವು ನಿಂತಿದ್ದೇವಲ್ಲಾ ಅನ್ನುವ ಹತಾಶೆ ಕೂಡ ಇದೆ.

ಮನೆಯಲ್ಲಿ ಹತ್ತಿಪ್ಪತ್ತು ಜನ ಸೇರುತ್ತಾರೆ ಎಂದರೂ ನಾವು ಕೇಟರಿಂಗ್‌ನವರ ಮೊರೆ ಹೋಗುತ್ತಿದ್ದೇವೆ, ಒಂದು ಊಟಕ್ಕೆ ಇಷ್ಟು ಎಂದು ಆರ್ಡರ್ ಮಾಡಿ ಅವರೇ ತಂದು ಅವರೇ ಬಡಿಸಿ ಹೋಗುವಂತೆ ಮಾಡುತ್ತಿದ್ದೇವೆ. 'ನಾವು ಪೇ ಮಾಡುತ್ತೇವೆ!' ಎನ್ನುವ ಮಾತು ಬೇರೆ! ಇವೆಲ್ಲಾ ಕಚೇರಿಗಳಿಗೆ, ಕರ್ತವ್ಯದ ಸ್ಥಳಗಳಿಗೆ ಸರಿ. ಅಲ್ಲಿ ಸಂಬಂಧಗಳು 'ಬಿಲ್' ಮತ್ತು 'ಬೆಲ್'ಗಳಿಗೆ ಮಾತ್ರ ಸೀಮಿತವಾಗಿರುತ್ತವೆ. ಈ ಪದ್ಧತಿ ಮನೆಯಂಗಳಕ್ಕೂ ಪ್ರವೇಶ ಮಾಡಿದೆ. ಪೂಜೆ, ಮದುವೆ ವಾರ್ಷಿಕೋತ್ಸವ, ಹುಟ್ಟಿದ ಹಬ್ಬಗಳಲ್ಲಿ ಇದನ್ನು ಕಾಣುತ್ತಿದ್ದೇವೆ. ಅಮ್ಮ, ಅಜ್ಜಿ, ಚಿಕ್ಕಮ್ಮ, ಮಾವ ಇವರೆಲ್ಲಾ ಸೇರಿ ಅಡುಗೆ ಮಾಡುತ್ತಿದ್ದ ದಿನಗಳಿದ್ದವು. ಹಾಗೆ ಒಟ್ಟಾಗಿ ಅಡುಗೆ ಮಾಡುವಾಗ ಅವರಾಡುತ್ತಿದ್ದ ಮಾತುಗಳು ಕೊಡುತ್ತಿದ್ದ ಟಿಪ್ಸ್‌ಗಳು ಇವನ್ನೆಲ್ಲ ಇವತ್ತು ಮಿಸ್ ಮಾಡಿಕೊಳ್ಳುತ್ತಿದ್ದೇವೆ.

ನಾವು ಚಿಕ್ಕವರಿದ್ದಾಗ ಏನೇ ಸಮಾರಂಭಗಳಾದರೂ ಮನೆಯಲ್ಲಿಯೇ ಅಡುಗೆ ಮಾಡುತ್ತಿದ್ದೆವು. ಹಾಗೆ ಒಲೆಯ ಮೇಲೆ ಅಡುಗೆ ಮಾಡುವಾಗ ಹಿರಿಯರು ಕೊಡುತ್ತಿದ್ದ ಟಿಪ್ಸ್‌ಗಳನ್ನು ಯಾವ